# ಬಿಎಸ್ಎನ್ಎಲ್ ಎಂಪ್ಲಾಯೀಸ್ ಯೂನಿಯನ್ (ರಿ)
## ಕರ್ನಾಟಕ ವಲಯ ಬೆಂಗಳೂರು

**ಕೇಂದ್ರ ಕಛೇರಿ, ದಾದ ಘೋಷ್ ಭವನ**
**2151/1, ನ್ಯೂ ಪಟೇಲ್ ನಗರ, ನವದೆಹಲಿ – 110008.**

## ದಿನಾಂಕ : 27.07.2017ರಂದು

# ಒಂದು ದಿನದ ಮುಷ್ಕರ

## ಸಂಪೂರ್ಣ ಯಶಸ್ವಿಗೊಳಿಸಿರಿ

ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ವೇತನ ಪರಿಷ್ಕರಣೆ 01.01.2017ರಿಂದ ಬಾಕಿಯಾಗಿದೆ. 3ನೇ ವೇತನ ಪರಿಷ್ಕರಣೆಯ ಸಲುವಾಗಿ ಸರ್ಕಾರ ಈಗಾಗಲೇ ಸಮಿತಿಯನ್ನು ರಚಿಸಿದ್ದು ಅದು ತನ್ನ ಶಿಫಾರಸ್ಸನ್ನು ಮಂಡಿಸಿದೆ. ಸರ್ಕಾರವು ತಾನು ರಚಿಸಿರುವ ಕಾರ್ಯದರ್ಶಿಗಳ ಸಮಿತಿಗೆ ವೇತನ ಪರಿಷ್ಕರಣೆ ಕುರಿತು ತನ್ನ ಶಿಫಾರಸ್ಸನ್ನು ತಿಳಿಸಲು ಹೇಳಿದೆ. 3ನೇ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಾರ್ವಜನಿಕ ಉದ್ದಿಮೆಗಳಲ್ಲಿನ ನೌಕರರಿಗೆ ಬಾಕಿಯಿರುವ ಪರಿಷ್ಕರಣೆಗೆ ಸಮಿತಿಯು ಒಂದು ಷರತ್ತನ್ನು ವಿಧಿಸಿದೆ. ಅದು ಈ ಕೆಳಕಂಡಂತಿದೆ.

**"3ನೇ ವೇತನ ಪರಿಷ್ಕರಣೆ ಜಾರಿಯಿಂದಾಗಿ ಆಗುವ ಹೆಚ್ಚುವರಿ ಆರ್ಥಿಕ ಹೊರೆ ಸಾರ್ವಜನಿಕ ಉದ್ದಿಮೆಯ ಕಳೆದ ಮೂರು ವರ್ಷಗಳ ತೆರಿಗೆ ಪೂರ್ವ ಲಾಭಾಂಶದ ಶೇಕಡಾ 20% ಕ್ಕಿಂತ ಮೀರಬಾರದು.**

ಈ ಷರತ್ತಿನ್ವಯ ಬಿಎಸ್ಎನ್ಎಲ್ 2009–10ರಿಂದ ನಷ್ಟವನ್ನನುಭವಿಸಿರುವುದರಿಂದ ನೌಕರರಿಗೆ ವೇತನ ಪರಿಷ್ಕರಣೆಯಾಗುವುದು ಕಷ್ಟ ಸಾಧ್ಯ. ಆದ್ದರಿಂದಲೇ ದಿನಾಂಕ 15.3.2017ರಂದು ಕಾರ್ಮಿಕ ಸಂಘಟನೆಗಳು ಮತ್ತು ಸಂಘಗಳು ನವದೆಹಲಿಯಲ್ಲಿ ಸಭೆ ಸೇರಿ ಬಿಎಸ್ಎನ್ಎಲ್‌ಗೆ ವಿಧಿಸಿರುವ "ಶಕ್ತತೆಯ ಷರತ್ತನ್ನು" ಹಿಂಪಡೆಯಬೇಕೆಂಬ ಬೇಡಿಕೆಯನ್ನಿಟ್ಟಿದೆ. ಈ ನಿಟ್ಟಿನಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ಸಂಘಗಳು ಈಗಾಗಲೇ ಡಿಓಟಿ ಕಾರ್ಯದರ್ಶಿಗಳಿಗೆ ಮತ್ತು ಡಿಪಿಇ ಕಾರ್ಯದರ್ಶಿಗಳಿಗೆ ಪತ್ರಗಳನ್ನು ಬರೆದಿವೆ. ನೌಕರರಿಗೆ 01.01.2017ರಿಂದ ಬಾಕಿಯಿರುವ ವೇತನ ಪರಿಷ್ಕರಣೆ ಒತ್ತಾಯಿಸಿ 05.04.2017ರಂದು **ಗಮನ ಸೆಳೆವ ಕಾರ್ಯಕ್ರಮ (ಬ್ಯಾಡ್ಜ್ ಧರಿಸಿ) ಭೋಜನ ವಿರಾಮದ ಪ್ರತಿಭಟನಾ ಸಭೆಯನ್ನು ನಡೆಸಲಾಯಿತು.** ಆಡಳಿತ ಮಂಡಳಿಯು ಸಹ ತನ್ನ ನೌಕರರಿಗೆ 01.01.2017ರಿಂದ ಬಾಕಿಯಿರುವ ವೇತನ ಪರಿಷ್ಕರಣೆ ಜಾರಿಯಾಗಬೇಕೆಂಬ ದೃಢ ನಿರ್ಧಾರದಲ್ಲಿದೆ. ಈ ವೇತನ ಪರಿಷ್ಕರಣೆಯಿಂದಾಗುವ ಹೆಚ್ಚುವರಿ ಆರ್ಥಿಕ ಹೊರೆಯನ್ನು ಆಂತರಿಕ ಮೂಲಗಳಿಂದ ಕ್ರೋಢೀಕರಿಸುವುದಾಗಿ ಸರ್ಕಾರಕ್ಕೆ ತಿಳಿಸಿದೆ.

ದಿನಾಂಕ 12.05.2017ರಂದು ಕಾರ್ಯದರ್ಶಿಗಳ ಸಮಿತಿ ಸಭೆ ಕ್ಯಾಬಿನೆಟ್ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ಬಾಕಿಯಿರುವ ವೇತನ ಪರಿಷ್ಕರಣೆಗೆ ವಿಧಿಸಿರುವ ಶಿಫಾರಸ್ಸಿನಲ್ಲಿ ಮಾರ್ಪಾಡುಗಳ ಅವಶ್ಯಕತೆ ಬಗ್ಗೆ ಚರ್ಚಿಸಲಾಯಿತು. ನ್ಯಾಯವಾಗಿ ಬಿಎಸ್ಎನ್ಎಲ್ ಕಂಪನಿಗೆ ಈ ಶಕ್ತತೆಯ ಷರತ್ತು ಅನ್ವಯಿಸಬಾರದಾಗಿದ್ದರೂ ಸಹ ಡಿಓಟಿ ಈ ಬಗ್ಗೆ ಚಕಾರ ಎತ್ತಲಿಲ್ಲ. ಯಾವುದೇ ಆಕ್ಷೇಪಣೆಗಳು ವ್ಯಕ್ತವಾಗದೆ ಇದ್ದುದರಿಂದ ಈ ಸಭೆಯಲ್ಲಿ ಯಾವುದೇ ಮಾರ್ಪಾಡುಗಳ ಚರ್ಚೆಯಾಗದೆ ಪ್ರಸ್ತುತ ಸಮಿತಿಯ ಶಿಫಾರಸ್ಸುಗಳು ಅಂಗೀಕಾರವಾಗಿದೆ. ಈ ತೀರ್ಮಾನ ಬಿಎಸ್ಎನ್ಎಲ್ ನೌಕರರಿಗೆ ದೊಡ್ಡ ಹಿನ್ನಡೆಯಾಗಿದೆ.

ಶೇಕಡ 90% ಬಿಎಸ್ಎನ್ಎಲ್ ನೌಕರರಿಗೆ 2017ರ ವೇತನ ಪರಿಷ್ಕರಣೆಯೇ ಕೊನೆಯ ವೇತನ ಪರಿಷ್ಕರಣೆ. ಮುಂದಿನ ವೇತನ ಪರಿಷ್ಕರಣೆಯ ವೇಳೆಗೆ ನಿವೃತ್ತರಾಗಿರುತ್ತಾರೆ. ಆದ್ದರಿಂದ ಈ ವೇತನ ಪರಿಷ್ಕರಣೆಯಾಗದಿದ್ದರೆ ಮುಂದೆ ಪಿಂಚಣಿಯಲ್ಲಿ ಬಹಳನಷ್ಟ ಉಂಟಾಗುತ್ತದೆ ಮತ್ತು ಜೀವನಪರ್ಯಂತ ಈ ನಷ್ಟ ಮುಂದುವರೆಯುತ್ತದೆ.

ದಿನಾಂಕ 2.06.2017ರಂದು ನವದೆಹಲಿಯಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ಸಂಘಗಳು ಈ ಎಲ್ಲ ಆಗುಹೋಗುಗಳ ಬಗ್ಗೆ ಚರ್ಚಿಸಿ 3ನೇ ವೇತನ ಪರಿಷ್ಕರಣೆಯನ್ನೊತ್ತಾಯಿಸಿ ವಿವಿಧ ಹೋರಾಟಗಳ ಕಾರ್ಯಕ್ರಮಗಳನ್ನು ನಿರ್ಧರಿಸಿದೆ. **ಇದರಂತೆ 20.06.2017ರಂದು ಒಂದು ದಿನದ ಧರಣಿ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿದೆ. 13.07.2017ರಂದು ಒಂದು ದಿನದ ಉಪವಾಸ ಸತ್ಯಾಗ್ರಹ ಹೋರಾಟವನ್ನು ಮತ್ತು 27.07.2017ರಂದು ಒಂದು ದಿನದ ಮುಷ್ಕರವನ್ನು ಹಮ್ಮಿಕೊಳ್ಳಲಾಗಿದೆ.**

**ಸರ್ಕಾರದ ಬಿಎಸ್ಎನ್ಎಲ್ ವಿರೋಧಿ ನೀತಿಗಳಿಂದಾಗಿ ಬಿಎಸ್ಎನ್ಎಲ್ ಕಂಪನಿಯ ಕುಸಿತ.**

ಬಿಎಸ್ಎನ್ಎಲ್ ಕಂಪನಿಯು ನಷ್ಟ ಅನುಭವಿಸಲು ಕಾರಣ ಕೇವಲ ಸರ್ಕಾರದ ಬಿಎಸ್ಎನ್ಎಲ್ ವಿರೋಧಿ ನೀತಿಗಳಿಂದ ಹೊರತು

ನೌಕರರಿಂದ ಅಲ್ಲ. ಕೆಲವು ಉದಾಹರಣೆಗಳನ್ನು ನೀಡುವುದಾದರೆ 1995ರಲ್ಲಿ ಖಾಸಗಿ ಕಂಪನಿಗಳಿಗೆ ಮೊಬೈಲ್ ಸೇವೆಯ ಪರವಾನಗಿ ನೀಡಲಾಯಿತು. ಆದರೆ ಈ ಪರವಾನಗಿ ಬಿಎಸ್‌ಎನ್‌ಎಲ್‌ಗೆ 7 ವರ್ಷಗಳ ನಂತರ 2002ರಲ್ಲಿ ನೀಡಲಾಯಿತು. ಸರ್ಕಾರ ಈ ಮೂಲಕ ಖಾಸಗಿ ಕಂಪನಿಗಳು ಆರಂಭದ ದಿನಗಳಲ್ಲೇ ಹೆಚ್ಚು ಲಾಭ ಮಾಡುವಂತೆ ಸಹಾಯ ಮಾಡಿತು.

ಖಾಸಗಿ ಕಂಪನಿಗಳು ಸರ್ಕಾರಕ್ಕೆ ನೀಡಬೇಕಿದ್ದ ಸಾವಿರಾರು ಕೋಟಿ ಪರವಾನಗಿ ಶುಲ್ಕಗಳ ಮೊತ್ತವನ್ನು ಸರ್ಕಾರಕ್ಕೆ ನೀಡಲು ವಿಫಲವಾದಾಗ ಸಹ ಸರ್ಕಾರ ಈ ಕಂಪನಿಗಳ ಸಹಾಯಕ್ಕೆ ನಿಂತಿತು. 1999ರಲ್ಲಿ ವಾಜಪೇಯಿ ಸರ್ಕಾರ "ನಿರ್ದಿಷ್ಟ ಪರವಾನಗಿ ಶುಲ್ಕ ಯುಗ"ವನ್ನು ರದ್ದುಗೊಳಿಸಿ ಹಣಗಳಿಕೆ ಪಾಲು ಯುಗ"ವನ್ನು ಜಾರಿಗೊಳಿಸಿ ಖಾಸಗಿ ಕಂಪನಿಗಳು ಸರ್ಕಾರಕ್ಕೆ ನೀಡಬೇಕಿದ್ದ ಸಾವಿರಾರು ಕೋಟಿ ಹಣವನ್ನು ಮನ್ನಾ ಮಾಡಲಾಯಿತು. ಇಂತಹ ಯಾವುದೇ ಸಲುಗೆಯನ್ನು ಸರ್ಕಾರ ಬಿಎಸ್‌ಎನ್‌ಎಲ್‌ಗೆ ಎಂದೂ ತೋರಲಿಲ್ಲ. ಆರಂಭಿಕ ದಿನಗಳಲ್ಲಿ ಖಾಸಗಿ ಕಂಪನಿಗಳು ADC [Access Deficiency Charges] ಪಾವತಿ ಮಾಡುತ್ತಿದ್ದವು. ಬಿಎಸ್‌ಎನ್‌ಎಲ್. ಕಂಪನಿಯು ಸ್ಥಿರ ದೂರವಾಣಿ ಸಂಪರ್ಕ ನೀಡುವಿಕೆಯಿಂದಾಗಿ ಆಗುವ ನಷ್ಟವನ್ನು ಸರಿತೂಗಲು ಇದು ಸಹಕಾರಿಯಾಗಿತ್ತು. ಆದರೆ ಖಾಸಗಿ ಕಂಪನಿಗಳಿಗೆ ಸಹಾಯವಾಗುವಂತೆ ಏಪ್ರಿಲ್ 2008ರಿಂದ ADCಯನ್ನು ರದ್ದುಗೊಳಿಸಲಾಯಿತು. ಹೀಗೆ ಮೇಲೆ ತಿಳಿಸಿರುವ 3 ಉದಾಹರಣೆಗಳಿಂದ ಸರ್ಕಾರವು ಬಿಎಸ್‌ಎನ್‌ಎಲ್ ಮೇಲೆ ತೋರಿದ ತಾರತಮ್ಯ ಧೋರಣೆ ಸಾಬೀತುಗೊಳಿಸುತ್ತದೆ.

ಖಾಸಗಿ ಕಂಪನಿಗಳ ಪರವಾಗಿ, ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದರ ಜೊತೆಗೆ ಬಿಎಸ್‌ಎನ್‌ಎಲ್‌ಗೆ ಬಹಳ ದೊಡ್ಡ ಪ್ರಮಾಣದ ಹಾನಿಯನ್ನುಂಟು ಮಾಡಿತು. ನೆಟ್‌ವರ್ಕ್ ವಿಸ್ತಾರ ಮಾಡಲು ತಡೆಗಳನ್ನು ನಿರ್ಮಾಣ ಮಾಡಲಾಯಿತು. 6 ವರ್ಷಗಳ ಕಾಲ ಮೊಬೈಲ್ ಉಪಕರಣಗಳನ್ನು ಖರೀದಿಸದಂತೆ ಟೆಂಡರ್ ಪ್ರಕ್ರಿಯೆಗಳನ್ನು ರದ್ದುಗೊಳಿಸಿತು. 2007ರಲ್ಲಿ 4.5 ಕೋಟಿ ಲೈನ್ ಮತ್ತು 2010ರಲ್ಲಿ 9.3 ಕೋಟಿ ಮೊಬೈಲ್ ಲೈನ್‌ಗಳ ಟೆಂಡರ್‌ಗಳ ರದ್ದತಿ ಉತ್ತಮ ಉದಾಹರಣೆಗಳು ಈ 6 ವರ್ಷಗಳಲ್ಲಿ ಬಿಎಸ್‌ಎನ್‌ಎಲ್‌ನ ಬೆಳವಣಿಗೆ ಸ್ಥಗಿತಗೊಂಡು ಸಂಪೂರ್ಣ ಕುಸಿತಕ್ಕೆ ಕಾರಣವಾಯಿತು.

ಮಾಜಿ ದೂರಸಂಪರ್ಕ ಇಲಾಖೆಯ ಮಂತ್ರಿಗಳಾದ ಶ್ರೀ ರವಿಶಂಕರ ಪ್ರಸಾದ್‌ರವರು ದಿನಾಂಕ 28.02.2015ರಂದು CNBC TV-18ಗೆ ನೀಡಿದ ಸಂದರ್ಶನವೊಂದು ಹೇಗೆ ಬಿಎಸ್‌ಎನ್‌ಎಲ್ ಕಂಪನಿಯನ್ನು ಸರ್ಕಾರ ದುರ್ಬಲಗೊಳಿಸಿತೆಂಬುದು ಸಾಬೀತಾಗುತ್ತದೆ ಸಂದರ್ಶನದ ಸಾರಾಂಶ ಈ ಕೆಳಕಂಡಂತಿದೆ.

"2005–06ರಲ್ಲಿ MTNL ಮತ್ತು BSNL ಕಂಪನಿಗಳು ಕೋಟಿಗಟ್ಟಲೆ ಲಾಭವನ್ನು ಮಾಡಿದ್ದವು. ಮುಂದಿನ ವರ್ಷಗಳಲ್ಲಿ ಈ ಎರಡೂ ಕಂಪನಿಗಳು ಚಿಂತಾಜನಕ ಸ್ಥಿತಿಗೆ ತಲುಪಲು ಕಾರಣವೇನು? ನಾನು ಈ ಸಂಬಂಧ ನೇರವಾಗಿ, ಮುಕ್ತವಾಗಿ ಹೇಳಬಲ್ಲೆ; UPA ಸರ್ಕಾರವು ಈ ಕಂಪನಿಗಳು ತಮ್ಮ ಏಳ್ಗೆ ಕಾಣದಂತಾಗಲು ನೇರವಾಗಿ ಜವಾಬ್ದಾರಿಯಾಗಿದೆಯೆಂದು."

ಇದೇ ರೀತಿ UPA ಇರಲಿ ಅಥವಾ NDA ಇರಲಿ – ಎಲ್ಲಾ ಕೇಂದ್ರ ಸರ್ಕಾರಗಳು ಬಿಎಸ್‌ಎನ್‌ಎಲ್ ಅವನತಿಗೆ ಯಾವ ರೀತಿ ಕಾರಣವಾಗಿದೆಯೆಂದು ಇದಕ್ಕಿಂತ ಮತ್ತೊಂದು ಉದಹಾರಣೆಯ ಅವಶ್ಯಕತೆಯಿರಲಾರದು.

ಬಿಎಸ್‌ಎನ್‌ಎಲ್‌ನ ಕಾರ್ಮಿಕ ಸಂಘಟನೆಗಳ ಮತ್ತು ಸಂಘಗಳು ಒಕ್ಕೂಟ / ವೇದಿಕೆ (Forum)ಗಳಡಿಯಲ್ಲಿ ಹಲವಾರು ನಿರಂತರ ಹೋರಾಟಗಳನ್ನು ಮಾಡಿ ಬಿಎಸ್‌ಎನ್‌ಎಲ್‌ನಲ್ಲಿ ಉಪಕರಣಗಳ ಖರೀದಿಗೆ ಒತ್ತಾಯಿಸುತ್ತಾ ಬಂದಿವೆ. ಈ ಕಾರಣದಿಂದಾಗಿ 2013ರಿಂದ ಬಿಎಸ್‌ಎನ್‌ಎಲ್ ಉಪಕರಣಗಳನ್ನು ಖರೀದಿಸಲು ಪ್ರಾರಂಭಿಸಿದೆ. ಈ ಉಪಕರಣಗಳ ಖರೀದಿ ಪ್ರಕ್ರಿಯೆಯನ್ನು ಉಪಯೋಗಿಸಿಕೊಂಡು ಒಕ್ಕೂಟವು ಎಲ್ಲ ನೌಕರರಲ್ಲಿ ಬಿಎಸ್‌ಎನ್‌ಎಲ್‌ನ ಆರ್ಥಿಕ ಪರಿಸ್ಥಿತಿಯ ಪುನಃಶ್ಚೇತನಕ್ಕೆ ದುಡಿಯುವಂತೆ ಮನವಿ ಮಾಡಿತು. "ಗ್ರಾಹಕರ ಸಂತೃಪ್ತಿ ಮಾಸಾಚರಣೆ" ಯೋಜನೆಯ ಮೂಲಕ ತದನಂತರ "ಗ್ರಾಹಕರ ಸಂತೃಪ್ತ ವರ್ಷಾಚರಣೆ" ಮೂಲಕ ನೌಕರರಲ್ಲಿ ಕಾರ್ಯ ಶಿಸ್ತನ್ನು ಪಾಲಿಸಲು ಪ್ರೇರೇಪಿಸಿತು. ಸಂಘಟನೆ ಮತ್ತು ಸಂಘಗಳು ಹಲವಾರು ಕಾರ್ಯಕ್ರಮಗಳ ಮೂಲಕ ಮಾರುಕಟ್ಟೆ ಚಟುವಟಿಕೆಗಳಲ್ಲಿ ನೌಕರರು ಹೆಚ್ಚು ಹೆಚ್ಚು ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಲಾಯಿತು. ಜನವರಿ 2016ರಲ್ಲಿ ಶುರುವಾದ "ಮುಗಳ್ನಗೆಯೊಂದಿಗೆ ಸೇವೆ" ನೌಕರರು ಉತ್ಕೃಷ್ಟ ಮಟ್ಟದ ಸೇವೆ ನೀಡುವಲ್ಲಿ ಹಾಗೂ ಗ್ರಾಹಕರ ಸಂಖ್ಯೆ ಹೆಚ್ಚುವಲ್ಲಿ ಸಹಕಾರಿಯಾಗಿದೆ. ಇದೇ ವೇದಿಕೆ/ಒಕ್ಕೂಟ ನೌಕರರಿಗೆ ಒಂದು ಗಂಟೆ ಹೆಚ್ಚು ಕೆಲಸ ಮಾಡಲು ಉತ್ತೇಜನ ಮತ್ತು ಮನವಿ ಮಾಡಲಾಯಿತು. (ಫೆಬ್ರವರಿ 10ರಿಂದ 31 ಮಾರ್ಚ್‌ವರೆಗೆ) ಇದರಿಂದ ಸಹ ಕಂಪನಿಯ ಆರ್ಥಿಕ ಬೆಳವಣಿಗೆಯಾಗಿದೆ.

ಬಿಎಸ್‌ಎನ್‌ಎಲ್ ಕಂಪನಿಯ ಪುನಃಶ್ಚೇತನ ಮತ್ತು ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ನೌಕರರು ಆಡಳಿತ ಮಂಡಳಿಗೆ ಸಂಪೂರ್ಣ ಸಹಕಾರ ನೀಡಿದ್ದರ ಪರಿಣಾಮವೇ ಕಂಪನಿಯ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಉದಾಹರಣೆಗೆ 2014–15ರಲ್ಲಿ ಬಿಎಸ್‌ಎನ್‌ಎಲ್ 8,234 ಕೋಟಿ ನಷ್ಟ ಅನುಭವಿಸಿದ್ದರೆ 2015–16ರಲ್ಲಿ ಈ ನಷ್ಟ 3,880 ಕೋಟಿಗಿಳಿದಿದೆ. 2014–15ರಲ್ಲಿ 672 ಕೋಟಿಗಳ, ಚಾಲನ ಹಣಗಳಿಕೆ ಮತ್ತು 2015–16ರಲ್ಲಿ (3854) ಕೋಟಿ ಚಾಲನಾ ಹಣಗಳಿಕೆ ಲಾಭ ಮಾಡಿದೆ. 8000 ಕೋಟಿ ಸವಕಳಿ (depreciation) ಯಿಂದಾಗಿ ಈಗಲೂ ನಷ್ಟ ಅನುಭವಿಸಿದೆ. ಮಾರುಕಟ್ಟೆ ಸಾಲಿನ ಪಟ್ಟಿಯಲ್ಲಿ ಬಿಎಸ್‌ಎನ್‌ಎಲ್ 6 ರಿಂದ 4ನೇ ಸ್ಥಾನಕ್ಕೇರಿದೆ. ನಿಧಾನವಾಗಿ ಬಿಎಸ್‌ಎನ್‌ಎಲ್ ಪುನಃಶ್ಚೇತನದ ಹಾದಿಯಲ್ಲಿ ಸಾಗಿದೆ. ಇಂತಹ ಸಂದರ್ಭದಲ್ಲಿ ನೌಕರರಿಗೆ ವೇತನ ಪರಿಷ್ಕರಣೆ ನಿರಾಕರಿಸಿದ ಪಕ್ಷದಲ್ಲಿ ನೌಕರರ ಆತ್ಮಸ್ಥೈರ್ಯವನ್ನು ಕುಗ್ಗಿಸಿದಂತಾಗಿ ಮತ್ತು ಬಿಎಸ್‌ಎನ್‌ಎಲ್‌ನ ಪುನಃಶ್ಚೇತನ ಮತ್ತು ಉತ್ಪಾದಕತೆಗೆ ಮಾರಕವಾಗುತ್ತದೆ. ಈ ಎಲ್ಲ ಪ್ರಯತ್ನಗಳಿಂದಾಗಿ ಬಿಎಸ್‌ಎನ್‌ಎಲ್ ಪುನಃಶ್ಚೇತನಗೊಳ್ಳುತ್ತಿರುವ ಈ ಸಂದರ್ಭದಲ್ಲಿ ನೌಕರರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ DPE ವಿಧಿಸಿರುವ ಶಕ್ತತೆಯ ಷರತ್ತನ್ನು ಹಿಂಪಡೆಯುವಂತೆ ಮತ್ತು 01.01.2017ರಿಂದ ಜಾರಿಯಾಗುವಂತೆ ವೇತನ ಪರಿಷ್ಕರಣೆಯನ್ನು ಗರಿಷ್ಠ ಫಿಟ್‌ಮೆಂಟ್‌ನೊಂದಿಗೆ ನೀಡಬೇಕೆಂದು ಒತ್ತಾಯಿಸುತ್ತಿದ್ದೇವೆ.

## ಬಿಎಸ್‌ಎನ್‌ಎಲ್‌ನ ನಿವೃತ್ತಿ ನೌಕರರಿಗೆ ಪಿಂಚಣಿ ಪರಿಷ್ಕರಣೆ.

ದೂರಸಂಪರ್ಕ ಇಲಾಖೆಯಲ್ಲಿ ನೇಮಕಗೊಂಡು ನಿವೃತ್ತರಾಗಿರುವ ಬಿಎಸ್‌ಎನ್‌ಎಲ್ ನಿವೃತ್ತಿದಾರರಿಗೆ ಪಿಂಚಣಿ ಪರಿಷ್ಕರಣೆ ಬಾಕಿಯಾಗಿದೆ. ಇವರೆಲ್ಲರೂ ಸರ್ಕಾರಿ ಪಿಂಚಣಿದಾರರು. ಆದರೆ ಇದರ ಬಗ್ಗೆ ಎಲ್ಲಿಯೂ ಪ್ರಸ್ತಾವನೆಯಾಗಿಲ್ಲ. (7ನೇ ಕೇಂದ್ರ ಸರ್ಕಾರದ ವೇತನ ಆಯೋಗದಲ್ಲಾಗಲಿ ಅಥವಾ 3 PRCಯಲ್ಲಿ) ಬಿಎಸ್‌ಎನ್‌ಎಲ್ ನೌಕರರಿಗೆ IDA ವೇತನ ಶ್ರೇಣಿ ಜಾರಿಯಾಗಿರುವುದೆಂದು ಉಲ್ಲೇಖಿಸಿ 7ನೇ CPC ಯಲ್ಲಿ ಪ್ರಸ್ತಾವನೆಯಾಗಿಲ್ಲ. 3ನೇ PRC ಕೂಡ ಈ ಬಗ್ಗೆ ಸ್ಪಷ್ಟೀಕರಿಸಿಲ್ಲ. ಕಳೆದ ಬಾರಿ 01.01.2007ರಿಂದ ವೇತನ ಪರಿಷ್ಕರಣೆ ಜಾರಿಯಿದ್ದರೂ ಸಹ ಅಧಿಕಾರಿ ವರ್ಗಕ್ಕೆ 27.02.2009ರಂದು ಮತ್ತು ಅಧಿಕಾರಿಯೇತರ ವರ್ಗಕ್ಕೆ 07.05.2010ರಂದು ಆದೇಶ ಜಾರಿಯಾಯಿತು. ಆದರೆ ಪಿಂಚಣಿ ಪರಿಷ್ಕರಣೆಯ ಆದೇಶ ಬಹಳ ತಡವಾಗಿ 15.03.2011ರಂದು ಜಾರಿಯಾಯ್ತು ಈ ಬಾರಿ ಇಂತಹ ತಡವಾಗಬಾರದು. ಆದ್ದರಿಂದ ಕೂಡಲೆ ಪಿಂಚಣಿ ಪರಿಷ್ಕರಣೆಗೆ ಒತ್ತಾಯಿಸುತ್ತಿದ್ದೇವೆ.

## ಪಿಂಚಣಿ ಕೊಡುಗೆಯಲ್ಲಿನ ಅನ್ಯಾಯ.

6ನೇ ಕೇಂದ್ರ ವೇತನ ಆಯೋಗದ ಶಿಫಾರಸ್ಸಿನಂತೆ ಕೇಂದ್ರ ಸರ್ಕಾರದ ನೌಕರರಿಗೆ ನೌಕರರ ಪ್ರಸ್ತುತ ಮೂಲವೇತನದ ಆಧಾರದಲ್ಲಿ ಆಗುತ್ತಿದೆ. (ವೇತನ ಶ್ರೇಣಿಯ ನಿಜವಾದ ಮೂಲ ವೇತನದ ಆಧಾರದಲ್ಲಿ) ಇದು 01.01.2006 ರಿಂದ ಜಾರಿಯಲ್ಲಿದೆ (DOP&T Order No. 2/34/2008 ESTT. (Pay II) dated 19.11.2009) ಆದರೆ DOT ಯಿಂದ ಬಿಎಸ್‌ಎನ್‌ಎಲ್‌ಗೆ ಒಪ್ಪಿಗೆ ನೀಡಿ ಸೇರಿದ ನೌಕರರಿಗೆ ಪಿಂಚಣಿ ಕೊಡುಗೆ ವೇತನ ಶ್ರೇಣಿಯಲ್ಲಿನ ಗರಿಷ್ಠ ಮೂಲವೇತನದ ಆಧಾರದಲ್ಲಿ ಆಗುತ್ತಿದೆ. ಇದರಿಂದಾಗಿ ಬಿಎಸ್‌ಎನ್‌ಎಲ್ ಕಂಪನಿಯು ಪ್ರತಿವರ್ಷವೂ 400 ಕೋಟಿ ಹೆಚ್ಚುವರಿಯಾಗಿ ನೀಡುತ್ತಿದೆ. ಸರ್ಕಾರಿ ನೌಕರರು ಮತ್ತು ಬಿಎಸ್‌ಎನ್‌ಎಲ್‌ನ ನೌಕರರೂ ಇಬ್ಬರೂ ನಿವೃತ್ತಿಯಾದಾಗ ಸಮಾನ ಪಿಂಚಣಿ ಪಡೆಯುತ್ತಾರೆ. (ಕೊನೆಯ ಮೂಲ ಸಂಬಳದ ಶೇಕಡಾ 50%) ಆದ್ದರಿಂದ ಪಿಂಚಣಿ ಕೊಡುಗೆ ಕೂಡ ಇಬ್ಬರಿಗೂ ಸಮಾನವಾಗಿರಬೇಕೆಂಬುದು ಬೇಡಿಕೆ.

ಇದರಿಂದಾಗಿ ಬಿಎಸ್‌ಎನ್‌ಎಲ್‌ನಲ್ಲಿ 65% ಗ್ರೂಪ್ 'ಡಿ' ಮಜ್ದೂರ್ ವರ್ಗದ ನೌಕರರಿಗೆ ವೇತನ ನಿಶ್ಚಲತೆ (Stagnation) ನಿರ್ಮಾಣವಾಗುತ್ತಿದೆ ಕಳೆದ ವೇತನ ಪರಿಷ್ಕರಣೆಯಲ್ಲಿ ಬಹಳಷ್ಟು ವೇತನ ಶ್ರೇಣಿಯನ್ನು ಕಡಿಮೆ ನಿಗದಿಮಾಡಿದ್ದು ಈ ನಿಶ್ಚಲತೆಗೆ ಕಾರಣ (ಪಿಂಚಣಿ ಕೊಡುಗೆ ವೇತನ ಶ್ರೇಣಿಯ ಗರಿಷ್ಠ ಮೂಲ ವೇತನದ ಆಧಾರದ ಮೇಲಾದ್ದರಿಂದ) ಈ ಕಾರಣದಿಂದಾಗಿ ಬಹುತೇಕ ನೌಕರರು ನಿಶ್ಚಲತೆಯನ್ನು ಮುಚ್ಚಿದ್ದಾರೆ. (Stagnation) ಇದನ್ನು ಸರಿಪಡಿಸಲು 3ನೇ PRC ಯಲ್ಲಿ ಗರಿಷ್ಠವಾಧಿಯಿರುವ ವೇತನ ಶ್ರೇಣಿಗಳನ್ನು ಶಿಫಾರಸ್ಸು ಮಾಡಲಾಗಿದೆ. ಇದರಿಂದಾಗಿ ಮತ್ತೆ ಹೆಚ್ಚಿನ ಪಿಂಚಣಿ ಕೊಡುಗೆ ನೀಡಬೇಕಾಗುತ್ತದೆ. ಇದನ್ನು ಪರಿಹರಿಸಲು ಕೇಂದ್ರ ಸರ್ಕಾರದ ನೌಕರರಿಗೆ ಆಗುತ್ತಿರುವಂತೆ ವೇತನ ಶ್ರೇಣಿಯ ನಿಜವಾದ ಮೂಲ ವೇತನ (Actnal basic) ಆಧಾರದಲ್ಲಿ ಪಿಂಚಣಿ ಕೊಡುಗೆ ಬಿಎಸ್‌ಎನ್‌ಎಲ್ ನೌಕರರಿಗೂ ಅನ್ವಯಿಸಬೇಕು.

## ನೇರ ನೇಮಕಾತಿಯಾದ ನೌಕರರಿಗೆ ನಿವೃತ್ತಿ ಅನುಕೂಲಗಳು.

ಬಿಎಸ್‌ಎನ್‌ಎಲ್ ಕಂಪನಿಯಲ್ಲಿ ಸುಮಾರು 30,000 ನೇರ ನೇಮಕಾತಿಯಾದ ನೌಕರರಿದ್ದಾರೆ. ಇವರ್‍ಯಾರೂ ಸರ್ಕಾರಿ ಪಿಂಚಣಿಗೆ ಅರ್ಹರಲ್ಲ. ಇದುವರೆಗೂ ಬಿಎಸ್‌ಎನ್‌ಎಲ್ ಕಂಪನಿ ಇವರಿಗಾಗಿ ಒಂದು ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿಲ್ಲವೆಂಬುದು ಶೋಚನೀಯ 2ನೇ ವೇತನ ಪರಿಷ್ಕರಣೆ ಸಮಿತಿ PSU ಗಳು 30% ವೇತನವನ್ನು ಪಿಂಚಣಿ ಕೊಡುಗೆಯಾಗಿ ನೀಡಬೇಕೆಂದು ಶಿಫಾರಸ್ಸು ಮಾಡಿದೆ. ಆದರೆ ಬಿಎಸ್‌ಎನ್‌ಎಲ್‌ನ ಆಡಳಿತ ಮಂಡಳಿಯು ಇನ್ನೂ ಇದನ್ನು ಜಾರಿ ಮಾಡಿಲ್ಲ. ಎರಡು ವರ್ಷದ ಹಿಂದೆ ಆಡಳಿತ ಮಂಡಳಿ ಮತ್ತು ಸಂಘಟನೆಗಳ, ಸಂಘಗಳ ನಡುವೆ ಒಂದು ಒಪ್ಪಂದವಾಗಿ ಅದರ ಪ್ರಕಾರ ಬಿಎಸ್‌ಎನ್‌ಎಲ್‌ನ ಆಡಳಿತ ಮಂಡಳಿಯು ವೇತನದ 6% ಪಿಂಚಣಿ ಕೊಡುಗೆಯಾಗಿ ನೀಡಲು ಒಪ್ಪಲಾಯಿತು. ಆದರೆ ತದ್ವಿರುದ್ಧವಾಗಿ BSNLEU ಮತ್ತು SNEA ಸಂಘಟನೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಏಕಪಕ್ಷೀಯ ನಿರ್ಧಾರವನ್ನು ತೆಗೆದುಕೊಂಡು ಕೇವಲ 3% ಪಿಂಚಣಿ ಕೊಡುಗೆಗೆ ಒಪ್ಪಿಕೊಂಡಿದೆ. ಇದು ಒಪ್ಪುವಂತದಲ್ಲ. 2ನೇ ವೇತನ ಪರಿಷ್ಕರಣೆ ಸಮಿತಿಯ ಶಿಫಾರಸ್ಸಿನಂತೆ ಆಡಳಿತ ಮಂಡಳಿಯು ಈ ವಿಚಾರದಲ್ಲಿ ತೀರ್ಮಾನ ಕೈಗೊಳ್ಳಬೇಕು.

## ಕಾರ್ಮಿಕ ಸಂಘಟನೆಗಳ ಹಕ್ಕುಗಳ ವಿರುದ್ಧ ಪ್ರಹಾರ

ಬಿಎಸ್‌ಎನ್‌ಎಲ್‌ನ ಆಡಳಿತ ಮಂಡಳಿಯು ಕಾರ್ಮಿಕ ಸಂಘಟನೆಗಳ ಮತ್ತು ಸಂಘಗಳ ವಿರುದ್ಧ ಯುದ್ಧವನ್ನು ಆರಂಭಿಸಿದೆ. ಸಂಘಟನೆಗಳ ಮತ್ತು ಸಂಘಗಳ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ ಸುತ್ತೋಲೆಗಳನ್ನು ಪದೇ ಪದೇ ನೀಡುತ್ತಿದೆ. ಈ ನಡವಳಿಕೆ ವಿಚಿತ್ರವಾದದ್ದು ಮತ್ತು ಪೂರ್ವಾಗ್ರಹ. ಈ ಹಿಂದೆ ಬಿಎಸ್‌ಎನ್‌ಎಲ್‌ನ ಪುನಃಶ್ಚೇತನಕ್ಕಾಗಿ ಅಧಿಕಾರಿ ಮತ್ತು ಅಧಿಕಾರಿಯೇತರ ಸಂಘಟನೆಗಳು ಮತ್ತು ಸಂಘಗಳು ಹಲವಾರು ಚಳುವಳಿಗಳನ್ನು ಜಂಟಿಯಾಗಿ ನಡೆಸಿವೆ. ಆಶ್ಚರ್ಯವೆಂಬಂತೆ ಆಡಳಿತ ಮಂಡಳಿಯು ತನ್ನ ಪತ್ರ ಸಂ. BSNL/5-1/SR/2016 dated 08.03.2017 ಮೂಲಕ ಅಧಿಕಾರಿ ಮತ್ತು ಅಧಿಕಾರಿಯೇತರ ಸಂಘಟನೆಗಳು ಜಂಟಿ ಕ್ರಿಯಾ ಕಾರ್ಯಕ್ರಮಗಳನ್ನು ನಿಷೇಧಿಸಿರುವ ಆದೇಶ ಹೊರಡಿಸಿದೆ.

ತರುವಾಯ ಪಾಟಿಯಾಲ ನ್ಯಾಯಾಲಯದ ಆದೇಶವನ್ನು ನಮೂದಿಸುತ್ತಾ ಶಾಂತಿಯುತ ಪ್ರತಿಭಟನೆಗಳನ್ನು ಕೂಡ ನಿಷೇಧಿಸುವ ಆದೇಶ ಕಾರ್ಪೊರೇಟ್ ಕಛೇರಿ ಮಾಡಿದೆ. ಪಾಟಿಯಾಲ ನ್ಯಾಯಾಲಯದ ಆದೇಶ ಒಂದು ನಿರ್ದಿಷ್ಟ ಹೋರಾಟಕ್ಕೆ ಮಾತ್ರ ಸೀಮಿತ. ಬಿಎಸ್‌ಎನ್‌ಎಲ್‌ನಲ್ಲಿ ನಡೆಸುವ ಕಾರ್ಮಿಕ ಸಂಘಟನೆಗಳ ಚಳವಳಿಗಲ್ಲ. ಮತ್ತೊಮ್ಮೆ ನೌಕರರು ಭಾಗವಹಿಸುವ ಧರಣಿ ಕಾರ್ಯಕ್ರಮ

ಕೂಡ ಮುಷ್ಕರವೆಂದು ಪರಿಗಣಿಸುವುದಾಗಿ ಆದೇಶ ನೀಡಿದೆ. ಮುಖ್ಯ ಮಹಾಪ್ರಬಂಧಕರಿಗೆ "No Work No Pay" (ಕೆಲಸವಿಲ್ಲದೆ ಸಂಬಳವಿಲ್ಲ) ಕಾನೂನನ್ನು ಧರಣಿ ಮತ್ತು ಉಪವಾಸ ಸತ್ಯಾಗ್ರಹಕ್ಕೂ ಹೇರಲು ತಿಳಿಸಿದೆ. ಭಾರತದ ಸಂವಿಧಾನದಲ್ಲಿ ನೀಡಿರುವ ಹಕ್ಕಾದ ಶಾಂತಿಯುತ ಪ್ರತಿಭಟನೆಯನ್ನು ಹತ್ತಿಕ್ಕುವ ಪ್ರಯತ್ನ ಆಡಳಿತ ಮಂಡಳಿಯದ್ದಾಗಿದೆ. ಕಾರ್ಮಿಕ ಸಂಘಟನೆಗಳ ಹಕ್ಕುಗಳನ್ನು ಹತ್ತಿಕ್ಕುವ ಆಡಳಿತ ಮಂಡಳಿಯ ಈ ಕ್ರಮವನ್ನು ವಿರೋಧಿಸುತ್ತೇವೆ. ಕೂಡಲೆ ಆಡಳಿತ ಮಂಡಳಿಯು ಈ ದಮನಕಾರಿ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸುತ್ತೇವೆ.

## ಮಾಡು ಇಲ್ಲವೆ ಮಡಿ

ಆತ್ಮೀಯ ಸಂಗಾತಿಗಳೆ ನಾವು "ಮಾಡು ಇಲ್ಲವೆ ಮಡಿ" ಎಂಬ ಪರಿಸ್ಥಿತಿಯಲ್ಲಿದ್ದೇವೆ. ನಾವೆಲ್ಲರೂ 27.07.2017ರ ಒಂದು ದಿನದ ಮುಷ್ಕರವನ್ನು ಯಶಸ್ವಿ ಮಾಡಬೇಕಿದೆ. ಕೆಲವು ಸ್ನೇಹಿತರು ದೂರಸಂಪರ್ಕ ಖಾತೆಯ ಮಂತ್ರಿಗಳು, ಮತ್ತು DOT 3ನೇ ವೇತನ ಪರಿಷ್ಕರಣೆಗೆ ಸಕಾರಾತ್ಮಕ ಒಲವು ತೋರಿರುವ ಸಂದರ್ಭದಲ್ಲಿ ಮುಷ್ಕರ ಮಾಡುವುದು ಸಮಂಜಸವಲ್ಲವೆನ್ನುತ್ತಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನೌಕರ ಸಂಘಟನೆಗಳು ಮಾಡಿದ ತಪ್ಪನ್ನು ನಾವು ಮಾಡಬಾರದೆಂದು ತಿಳಿಸಬಯಸುತ್ತೇವೆ. 7ನೇ ವೇತನ ಆಯೋಗವು ಕೆಟ್ಟ ಶಿಫಾರಸ್ಸು ಮಾಡಿ ಉತ್ತಮ ಅನುಕೂಲ ಪಡೆಯಲಾಗದಂತೆ ಮಾಡಿದೆ. HRA ಅನ್ನು ಕಡಿತಗೊಳಿಸಿ ಪ್ರಸ್ತುತವಿದ್ದ 30%, 20%, 10% ಅನ್ನು ಕ್ರಮವಾಗಿ 24%, 16% ಮತ್ತು 8% ಗೆ ಇಳಿಸಿದೆ. ಕೇಂದ್ರ ಸರ್ಕಾರಿ ನೌಕರರು ಪಡೆಯುತ್ತಿದ್ದ 53 ವಿವಿಧ ಭತ್ಯೆಗಳನ್ನು ಹಿಂಪಡೆದಿದೆ. ಕೇಂದ್ರ ಸರ್ಕಾರಿ ನೌಕರರು ಮುಷ್ಕರದ ಕರೆ ಕೊಟ್ಟಂತಹ ಸಂದರ್ಭದಲ್ಲಿ ಹಿರಿಯ NDA ಮಂತ್ರಿಗಳಾದ ಶ್ರೀ ರಾಜನಾಥಸಿಂಗ್, ಗೃಹಮಂತ್ರಿ, ಉಪಮಂತ್ರಿಗಳಾದ ಶ್ರೀ ಅರುಣ್‌ಜೇಟ್ಲಿ, ರೈಲ್ವೆ ಇಲಾಖೆ ಮಂತ್ರಿಗಳಾದ ಶ್ರೀ ಸುರೇಶ್ ಪ್ರಭು, ನೌಕರ ಸಂಘಟನೆಗಳೊಂದಿಗೆ ಸಭೆ ನಡೆಯಿಸಿ ಪರಿಹಾರ ನೀಡುವುದಾಗಿ ಭರವಸೆ ಇತ್ತರು. ಈ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರಿ ನೌಕರರು ಮುಷ್ಕರ ಹಿಂಪಡೆದರು. ಆದರೆ ಹಿರಿಯ ಮಂತ್ರಿಗಳತ್ತ ಭರವಸೆ ಈಡೇರಿಸಲಾಗಲಿಲ್ಲ. ಈಗ 48ಲಕ್ಷ ಕೇಂದ್ರ ಸರ್ಕಾರಿ ನೌಕರರಿಗೆ, ಸರ್ಕಾರದಿಂದ ನಂಬಿಕೆ ದ್ರೋಹವಾಗಿದೆ.

ಹಾಗಾಗಿ ಕೇಂದ್ರ ಸರ್ಕಾರಿ ನೌಕರರ ಸಂಘಟನೆಗಳು ಎಸಗಿದ ತಪ್ಪುಗಳನ್ನು ನಾವೆಸಗಬಾರದು. ಸರ್ಕಾರದ ಹಿರಿಯ ಮಂತ್ರಿಗಳಿತ್ತ ಆಶ್ವಾಸನೆ ಹೇಗೆ ಗಾಳಿಗೆ ತೂರಲಾಯಿತು ಎಂಬುದನ್ನು ನಾವು ಮರೆಯಬಾರದು. 3ನೇ ವೇತನ ಪರಿಷ್ಕರಣೆ ಬಗ್ಗೆ ಕ್ಯಾಬಿನೆಟ್ ಯಾವುದೇ ತೀರ್ಮಾನಕ್ಕೆ ಬಂದಿಲ್ಲ. ಕೇಂದ್ರ ಸರ್ಕಾರದ ಗಮನವನ್ನು ಸೆಳೆಯುವುದು ಬಿಎಸ್‌ಎನ್‌ಎಲ್ ನೌಕರರ ಕರ್ತವ್ಯವಾಗಿದೆ. ಸರ್ಕಾರ ನಮ್ಮ ಕೂಗನ್ನು ಕೇಳುವಂತಾಗಬೇಕು. ಬಿಎಸ್‌ಎನ್‌ಎಲ್‌ನ ಎಲ್ಲ ನೌಕರರು ಸರ್ಕಾರದ ಮೇಲೆ ಒತ್ತಡವನ್ನು ಹೇರಿ 3ನೇ ವೇತನ ಪರಿಷ್ಕರಣೆ ನೀಡಲು ಒಪ್ಪುವಂತೆ ಮಾಡಬೇಕಾಗಿದೆ.

## ತೀರ್ಮಾನ

NDA ಸರ್ಕಾರವು ದೇಶದ ಎಲ್ಲ ಸಾರ್ವಜನಿಕ ಉದ್ದಿಮೆಗಳ ಮೇಲೆ ಗಂಭೀರ ದಾಳಿ ನಡೆಸುತ್ತಿದೆ. ಕೇಂದ್ರ ಮಂತ್ರಿಮಂಡಲ ಈಗಾಗಲೇ ಏರ್ ಇಂಡಿಯಾವನ್ನು ಖಾಸಗಿಕರಣ ಮಾಡುವ ನಿರ್ಧಾರ ತಾಳಿದೆ. ಭಾರತೀಯ ರೈಲ್ವೆ ಇಲಾಖೆಯನ್ನು ಕೂಡ ಭಾಗಗಳಾಗಿ ವಿಂಗಡಿಸಿ ಕಾರ್ಪೊರೇಟ್‌ಗಳಿಗೆ ನೀಡುವ ಹುನ್ನಾರದಲ್ಲಿದೆ. ಸಂಪೂರ್ಣ ರಕ್ಷಣಾ ಇಲಾಖೆಯ ಉತ್ಪಾದನೆಯನ್ನು ಕೂಡ ಭಾರತೀಯ ಮತ್ತು ಬಹುರಾಷ್ಟ್ರೀಯ ಕಾರ್ಪೊರೇಟ್‌ಗಳಿಗೆ ನೀಡಲಾಗುತ್ತಿದೆ. ಬ್ಯಾಂಕಿಂಗ್ ಮತ್ತು ವಿಮಾ ಸಾರ್ವಜನಿಕ ಉದ್ದಿಮೆಗಳ ಮೇಲೂ ಸಹ ಕೇಂದ್ರ ಸರ್ಕಾರದ ಪ್ರಹಾರಕ್ಕೊಳಗಾಗಿದೆ. ವ್ಯವಸ್ಥಿತವಾಗಿ ಬಿಎಸ್‌ಎನ್‌ಎಲ್ಲನ್ನು ಕೂಡ MTNL ನೊಂದಿಗೆ ವಿಲೀನಗೊಳಿಸಿ, ಪ್ರತ್ಯೇಕ ಟವರ್ ಕಂಪನಿ ಸ್ಥಾಪಿಸಿ, ಅವನತಿಗೆ ದೂಡುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. 3ನೇ ವೇತನ ಪರಿಷ್ಕರಣೆ ಕೂಡ ಸರ್ಕಾರದ ಪೂರ್ವಾಯೋಜಿತ ಕ್ರಮ ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಯ ನೌಕರರಿಗೆ 3ನೇ ವೇತನ ಪರಿಷ್ಕರಣೆ ನೀಡಲಾಗದು ಎಂಬುದು ಯೋಜಿತ ಕಾರ್ಯಕ್ರಮ. ಆದ್ದರಿಂದ ಗಂಭೀರ ಚಳುವಳಿ ಮತ್ತು ನಿರಂತರ ಹೋರಾಟಗಳಿಲ್ಲದೆ, ಬಿಎಸ್‌ಎನ್‌ಎಲ್‌ನಲ್ಲಿ 3ನೇ ವೇತನ ಪರಿಷ್ಕರಣೆ ಅಸಾಧ್ಯ. ಈ ಎಲ್ಲ ಕಾರಣಗಳಿಂದ ಬಿಎಸ್‌ಎನ್‌ಎಲ್ ಎಲ್ಲ ಅಧಿಕಾರಿ ಮತ್ತು ಅಧಿಕಾರಿಯೇತರ ನೌಕರರು ಒಗ್ಗಟ್ಟಿನಿಂದ ನಮ್ಮ ಈ ಕರೆಗೆ ಓಗೊಟ್ಟು 27.07.2017ರಂದು ಒಂದು ದಿನದ ಮುಷ್ಕರವನ್ನು ಅತ್ಯಂತ ಯಶಸ್ವಿಯಾಗಿಸಬೇಕೆಂದು ಕೋರುತ್ತೇವೆ.

**ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ.**

**ಇಂನ್ಕ್ವಿಲಾಬ್ ಜಿಂದಾಬಾದ್**

(BSNLEU CHQ ವಿನ ಇಂಗ್ಲೀಷ್ ಕರಪತ್ರದ ಕನ್ನಡಾನುವಾದ.
**ಕನ್ನಡಕ್ಕೆ : ಸಂಗಾತಿ ಹೆಚ್.ವಿ.ಸುದರ್ಶನ್, ಜಿಲ್ಲಾ ಕಾರ್ಯದರ್ಶಿ,**
**ಬೆಂಗಳೂರು ಜಿಲ್ಲೆ ಮತ್ತು ಅಖಿಲ ಭಾರತ ಸಂಘಟನಾ ಕಾರ್ಯದರ್ಶಿ)**

# BSNL EMPLOYEES UNION

**Central Head Quarters,**
**Dada Ghosh Bhawan, 2151/1, New Patel Nagar,**
**New Delhi- 110008**

# One day strike on 27.07.2017.

## Make it a total success.

Wage revision of the Public Sector employees has become due from 01.01.2017. The 3rd Pay Revision Committee (3rd PRC) formed by the government, has already submitted it's recommendations. The government has formed a 'Committee of Secretaries', which has been directed to give it's recommendations, with regards to the implementation of the recommendations of the 3rd PRC. So far as the eligibility of the Public Sector employees to wage revision, the 3rd PRC has laid down the following as the criterion:-

***"Additional financial impact should not be more than 20% of the average PBT of the last 3 financial years preceding the year of implementation."***

Since BSNL is running in loss from 2009-10, the employees of BSNL are not eligible for wage revision, as per the recommendations of the 3rd PRC. Hence, the unions and associations met at New Delhi on 15.03.2017, and have rightly demanded that BSNL should be exempted from the 'Affordability Clause' of the 3rd PRC. The unions and associations have written to the Secretary, DoT and Secretary, DPE, demanding that BSNL should be exempted from the Affordability Clause of the 3rd PRC. As per the call of the Unions and Associations, Call Attention Day was observed by the BSNL employees on 05.04.2017, by wearing badges and conducting lunch hour demonstrations. The BSNL Management has also taken a firm position that the employees should get wage revision w.e.f. 01.01.2017. It has also informed the government that the Company will mobilise resources internally, to meet the expenditure on account of wage revision.

The 'Committee of Secretaries' met at New Delhi on 12.05.2017, under the chairmanship of the Cabinet Secretary. The Committee discussed whether any major deviation from the recommendations of the 3rd PRC, is required in the case of any PSU. Eventhough, BSNL requires exemption from the Affordability Clause of the 3rd PRC, a demand to this effect was not placed in that meeting by the DoT. Hence, the meeting concluded that, no major deviation from the recommendations of the 3rd PRC, needs to be given to any PSU. This is a great set back to the employees of BSNL.

***For more than 90% of the BSNL employees, this is the last wage revision of their service. They will not be there at the time of the next wage revision from 01.01.2027. If these employees do not get wage revision from 01.01.2017, then they will face severe loss in pension, and it will be a life long loss to them.***

The unions and associations which met at New Delhi on 02.06.2017, reviewed the entire episode, and decided to give call to the employees to go on struggle, for the settlement of wage revision from 01.01.2017. Accordingly, day long dharna was observed throughout the country on 20.06.2017. Hunger strike will be observed on 13.07.2017 and one day strike will be organised on 27.07.2017.

### Government's anti-BSNL policies reason for down-fall of BSNL.

BSNL has become a loss making company, not because of the employees, but because of the anti BSNL policies of the government. The following are a few examples. When mobile service came to

India, it was the private companies which were the first to get licences in 1995. BSNL was issued with the licence only after 7 long years, i.e., in 2002. It was a well thought out plan of the government to give this head-start (initial benefit) to the private telecom companies. When the private companies defaulted payment of licence fee to the government, amounting to thousands of crores of rupees, again it was the government which came to their rescue. In 1999 the Vajpayee government abolished the “Fixed Licence Fee Regime” and switched over to the “Revenue Sharing Regime”. Thus, the thousands of crores of rupees, due to be paid as licence fee, by the private companies to the government, were written off by the Vajpayee government. This sort of kindness has never been shown to BSNL. From the beginning, private telecom companies were paying Access Deficit Charge (ADC) to BSNL. This was to compensate BSNL for it’s losses on account of providing landline service. But, the ADC was abolished in the year 2008, to the benefit of the private companies. All the above mentioned three examples prove the step-motherly attitude of the government towards BSNL.

Apart from favouring the private companies, the government has done irreparable damages to BSNL, by creating road-blocks in it’s network expansion. For nearly six years, the government did not allow BSNL to procure mobile equipments. One after another, the tenders floated by BSNL, to procure equipments, were cancelled by the government. The 45 million line tender, which was cancelled in 2007, and the 90 million line tender, cancelled in the year 2010, were good examples. During these six years, BSNL’s growth was crippled in the mobile segment, and this was the main reason for the down-fall of BSNL.

How BSNL was weakened by the government, can be well explained by the statement made by shri Ravi Shankar Prasad, former Minister of communications. In an interview given to the CNBC-TV18 on 28.02.2015, the former Minister of Communications, stated on record as, ***“Both BSNL and MTNL were in profit by the year 2005-2006, thousands and thousands of crore. What happened in the subsequent years that they have come under such a critical state? Something which I can openly tell you today that every attempt was made that they are not allowed to expand.”*** What more evidence is required to prove that it was the government which weakened BSNL and that the employees are in no way responsible for it.

The unions and associations, under the banner of the Forum, fought against the cancellations of BSNL’s tenders. They continuously struggled for equipment supply to BSNL. As a result, BSNL started procuring equipments from 2013 onwards. Utilising the expansion of networks, the unions and associations called on the employees to actively participate in the financial revival of the Company. The Customer Delight Year, mainly aimed at improving the work culture of the employees, helped in a big way to improve the productivity of the employees. The unions and associations observed many more programme to actively involve the employees in the marketing activities, as well as in the improvement of quality of services. The “Service With A Smile” programme, launched in January, 2016, motivated the employees in a big way to improve the quality of services and also to rapidly expand BSNL’s customer base. It is also significant to

As a result of the active participation of the employees in the revival process of BSNL, together with the efforts taken by the Management to rapidly expand BSNL’s networks, the financial position of the Company has significantly improved. For example, BSNL’s loss stood at Rs.8,234 crore in 2014–15, whereas it has come down to Rs.3,880 crore in 2015 – 16. BSNL has made operational profits of Rs.672 crore and Rs.3,854 crore respectively, during last two years. But, the balance sheet is still negative due to the huge amount of around Rs.8,000 crore accounted as depreciation. Year by year, revenue also increases. BSNL also advanced from 6th position to the 4th position, in terms of market share. Everyone agrees that BSNL is steadily moving in the revival path. At this juncture, non-implementation of wage revision, will demoralise the employees and will seriously affect the productivity and revival of BSNL. Now, BSNL is on the revival mode and the employees are to be motivated at this point of time. Considering all the above factors, we demand that BSNL should be exempted from the Affordability Clause of the 3rd PRC, and that the employees should be given wage revision w.e.f. 01.01.2017, with the maximum fitment. mention that, the unions and associations called on the employees to work one hour extra every day, from 10th February to 31st March, 2017, to boost the revenue collection of the Company.

## Pension Revision to BSNL retirees.

The pension revision of BSNL pensioners (DoT recruitees) has also become due. They are covered by

Govt. pension. However there is no mention about the pension revision of the BSNL pensioners, either in 7th CPC or in 3rd PRC. The 7th CPC did not cover it on the plea that BSNL employees are having IDA pay scales. But 3rd PRC also did not touch this aspect. It is pertinent to mention that, at the time of last wage revision, i.e., w.e.f. 01.01.2007, the orders for wage revision of the BSNL Executives were issued on 27.02.2009 and the orders for wage revision of the Non-Executives were issued on 07.05.2010. However, order for revision of pension of the BSNL retirees was issued much belatedly, i.e., only on 15.03.2011 Such a delay should not take place this time. Hence, we demand immediate pension revision to BSNL retirees.

## Injustice in Pension Contribution.

As per the recommendations of the 6th Central Pay Commission, pension contribution is being collected for the entire Central Government Employees, based on their basic pay (Pay in the Pay Band plus Grade Pay). This is implemented w.e.f. 01.01.2006 as per DOP&T Order No. 2/34/2008-Estt. (Pay II) dated 19.11.2009. Whereas, in the case of the DoT employees who are absorbed in BSNL, still pension contribution is being collected based on the maximum of their pay scale. As a result of this, BSNL is paying around Rs.400 crore in excess to the government every year. On retirement, both the Central Government employees, as well as the DoT employees absorbed in BSNL, are eligible for the same government pension and pension is 50% of the last pay drawn. As such, the pension contribution, to be paid in respect of both these sections of employees, should also be the same.

A serious offshoot of this wrong method of calculation of pension contribution is the problem of stagnation, being faced by almost 65% of BSNL employees in the categories of Regular Mazdoor, Group 'D', etc. This is because, in the last Wage Revision, the Management had kept the maximum of the pay scales of the employees as low as possible, with a view to lessen the burden of pension contribution to be paid to the government. As a result of this, an abnormally large number of employees have reached the maximum of their pay scales and are suffering from the problem of stagnation. Similarly Executives are also facing stagnation. To address the issue of stagnation, 3rd PRC has recommended pay scales with large span, almost the double of the 2nd PRC pay scales. This will result in huge payment of pension contribution, almost three times, if BSNL is again forced to pay the pension contribution on maximum of the pay scale. The only way to solve this problem is that, pension contribution of BSNL employees should also be calculated based on the actual basic pay, and not based on the maximum of the pay scale.

## *Superannuation benefits to the Directly Recruited employees.*

BSNL is having more than 30,000 Directly Recruited employees. They are not eligible for government pension. And it is a tragedy that BSNL has not put in place a pension scheme for them till date. The 2nd PRC recommended that the PSUs should contribute 30% of the pay of these Directly Recruited employees, as superannuation benefits. Pension contribution is also a part of this superannuation benefit But the BSNL Management has so far not implemented this. Almost two years ago, an understanding was reached between the Management and the unions and associations, according to which the Management would contribute 6% of pay as pension contribution. However, subsequently, the Management back tracked from this understanding, without consulting BSNLEU and SNEA, and decided that it could contribute only 3% as pension contribution. This is unacceptable. The Management should immediately settle this issue as per the recommendations of the 2nd PRC.

## Attack on trade union rights.

The BSNL Management has declared a war on the unions and associations. Instruction after instruction are being issued to the circles, for curtailing the legitimate rights of the unions and associations. Even peaceful agitations are being crushed. All these actions are nothing but whimsical and prejudiced. When the unions of the Non-Executives and associations of the Executives have conducted many movements jointly in the past, for the revival of the Company, it is surprising that order was issued by the Management, vide letter no.BSNL/5-1/SR/2016 dated 08.03.2017, banning joint action programme by the unions and associations of the Non-Executives and Executives.

Subsequently, citing an order of the Patiala House District Court, the Corporate Office has issued a letter, banning even peaceful agitations. The order of the Patiala House District Court pertains only to a particular agitation. It is not an order that bans all trade union agitations in BSNL. Again, another order has

been issued, which says dharna will also be treated as strike. Vide this letter, the Corporate Office has instructed all the CGMs to impose “No Work No Pay” on the employees who participate in dharna, hunger strike, etc. These instructions of the Corporate Office are nothing but denial of the fundamental rights of the workers, enshrined in the Constitution of India. We cannot allow the trade union rights to be crushed. We demand the BSNL Management to withdraw all these repressive orders.

## *Do or Die*

Dear comrades, we are in a “Do or Die” situation. We have to make the one day strike on 27.07.2017 a total success. Some friends say that we need not go on strike at this juncture, since the Hon’ble Minister of State for Communications, as well as the DoT, are very positive in the matter of our wage revision. In this regard, we only like to say that the mistake committed by the Central Government Unions, should not be repeated by us. The 7th CPC gave the worst recommendations in the matter of fitment formula and allowances. HRA was cut down from 30%, 20%, 10% to 24%,16% and 8% respectively. 53 allowances being received by the Central Government employees were withdrawn. Central Government Unions gave call to go on strike. However, senior NDA ministers, viz., shri Rajnath Singh, Home Minister, shri Arun Jaitley, Finance Minister and shri Suresh Prabhu, Railway Minister, held meeting with the leaders and assured to settle the issues. Keeping faith on the assurance given by the senior most ministers, the union leaders withdrew the strike. However, the assurances given by the senior most ministers of the NDA government were not honoured. Now, the entire 48 lakh central governments remain betrayed by the government.

BSNL unions and associations should not repeat the mistake committed by the leaders of the Central Government employees. We have to remember how the assurances given to the Central Government employees, by the senior most ministers of the NDA government, were not implemented. In the matter of the recommendations of the 3rd PRC, the Central Cabinet has so far not taken it’s final decision. This is the time for the entire BSNL employees to make the government to hear their voice. This is the time for the entire BSNL employees to create compulsion on the government to accept giving wage revision to BSNL employees.

## Conclusion

The NDA government is launching serious attacks on the Public Sector of our country. The Central Cabinet has already decided to privatise Air India. The government is working out a plan to break the Indian Railways in to pieces and to hand it over to different corporates. Total defence production is being handed over to the Indian and foreign corporates. The public sector companies in the banking and insurances sectors are also under severe attacks from the government. In accordance with this policy, the government is already trying to finish off BSNL, through merger with MTNL and by forming a Subsidiary Tower Company. We have to understand that, the recommendations of the 3rd PRC are nothing, but a well thought-out plan of the NDA government, to deny wage revision to the employees of the loss making PSUs. Thus, wage revision for BSNL employees cannot be achieved without serious and sustained struggles. We call upon the entire BSNL employees to massively respond to the call given by the unions and associations, for a one day strike on 27.07.2017, and to make it a total success.

## *WORKERS UNITY ZINDABAD!!*
## *INQUILAB ZINDABAD!!*